2
/8
12/03/2020

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	693 (987)
ಸದಸ್ಯರ ಹೆಸರು	ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	**12.03.2020**
ಉತ್ತರಿಸುವ ಸಚಿವರು	ಸನ್ಮಾನ್ಯ ಮುಖ್ಯಮಂತ್ರಿಯವರು

ಪ್ರಶ್ನೆ	ಉತ್ತರ
ಅ) ಶಾರ್ಟ್ ಸರ್ವೀಸ್ ಕಮೀಷನ್ಡ್ ಅಡಿಯಲ್ಲಿ ಸೇವೆ ಸಲ್ಲಿಸಿ ರಾಜ್ಯ ಸಿವಿಲ್ ಸೇವೆಯಲ್ಲಿರುವ ಅಧಿಕಾರಿಗಳಿಗೆ ಬಡ್ತಿ ನೀಡುವಾಗ ನಿಯಮಗಳಲ್ಲಿ ವಿಶೇಷ ಅವಕಾಶವಿದ್ದಾಗ್ಯೂ ಸರ್ಕಾರ ಇದನ್ನು ಪರಿಗಣಿಸದಿರುವುದು ನಿಜವೇ; ನಿಜವಿದ್ದಲ್ಲಿ ಕಾರಣಗಳೇನು;	ನಿಜವಲ್ಲ.
ಆ) ಕೇಂದ್ರ ಸರ್ಕಾರವು ಶಾರ್ಟ್ ಸರ್ವೀಸ್ ಕಮೀಷನ್ಡ್ ಅಧಿಕಾರಿಗಳ ನೇಮಕಾತಿ ಅರ್ಹತಾ ದಿನಾಂಕವನ್ನು ನಿರ್ಧರಿಸಲು ಆಯಾ ರಾಜ್ಯ ಸರ್ಕಾರಗಳೇ ಪ್ರಾಧಿಕಾರಗಳೆಂದು ಹೇಳಿದ್ದರೂ ಇಲ್ಲಿಯ ಸರ್ಕಾರಿ ಸಿವಿಲ್ ಸೇವೆಯಲ್ಲಿರುವ ನೌಕರರ ಜೇಷ್ಠತೆಯನ್ನು ಇನ್ನೂ ಏಕೆ ನಿಗದಿಪಡಿಸಿರುವುದಿಲ್ಲ;	ಐ.ಎ.ಎಸ್. ಮುಂಬಡ್ತಿಗಾಗಿ ಅರ್ಹತಾದಾಯಕವಾದ ಎಂಟು ವರ್ಷಗಳ ಸೇವೆಯನ್ನು ನಿರ್ಣಯಿಸುವಾಗ, Indian Administrative Service (Appointment by Promotion) Regulation, 1955 ರ ನಿಯಮ 5(2)ರನ್ವಯ, ಶಾರ್ಟ್ ಸರ್ವೀಸ್ ಕಮೀಷನ್ಡ್ ಅಧಿಕಾರಿಗಳ ಸೈನಿಕ ಸೇವೆಯನ್ನು ಪರಿಗಣಿಸಲಾಗುತ್ತದೆ. ಪ್ರತ್ಯೇಕವಾಗಿ ಜೇಷ್ಠತೆ ನಿಗದಿಪಡಿಸಲು ನಿಯಮವಿರುವುದಿಲ್ಲ.
ಇ) ಕೇಂದ್ರ ಲೋಕಸೇವಾ ಆಯೋಗವು ಬಡ್ತಿ ನಿಯಮಗಳಲ್ಲಿ ಶಾರ್ಟ್ ಸರ್ವೀಸ್ ಕಮೀಷನ್ಡ್ ಅಧಿಕಾರಿಗಳ ಜೇಷ್ಠತೆಯಲ್ಲಿ ಸೈನ್ಯದಲ್ಲಿ ಸಲ್ಲಿಸಿದ ಸೇವಾವಧಿಯನ್ನು ಪರಿಗಣಿಸಿ ನಿರ್ಧರಿಸಬೇಕು ಎಂದು ಸೂಚಿಸಿದ್ದಾಗ್ಯೂ ಕೇವಲ ರಾಜ್ಯ ಸಿವಿಲ್ ಸೇವೆಯ ಅವಧಿಯನ್ನು ಪರಿಗಣಿಸಿ ಕೇಂದ್ರ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಕಳುಹಿಸಿರುವುದು ನಿಜವೇ; ನಿಜವಿದ್ದಲ್ಲಿ ಕಾರಣಗಳೇನು;	ನಿಜವಲ್ಲ.

ಈ) ಕೇಂದ್ರ ಆಡಳಿತ ನ್ಯಾಯ ಮಂಡಳಿ ತನ್ನ ಪತ್ರ ಸಿಎಟಿ 230/2016 ರಲ್ಲಿ ಕಾನೂನಿಗೆ ವಿರುದ್ಧವಾದದ್ದೆಂದು ಹೇಳಿದ್ದರೂ ನಿಯಮಬಾಹಿರವಾಗಿ ಕೆಲವರಿಗೆ ಅರ್ಹತಾ ದಿನಾಂಕವನ್ನು ನಿಗದಿಪಡಿಸಿದ ಅಧಿಸೂಚನೆಯನ್ನು ಹಿಂಪಡೆದಿರುವುದು ನಿಜವೇ; ನಿಜವಿದ್ದಲ್ಲಿ, ಅವರ ಹೆಸರು ಮತ್ತು ಹುದ್ದೆ ಕುರಿತು ಮಾಹಿತಿ ನೀಡುವುದು;	ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಆಧರಿಸಿ, ಕಾನೂನು ಇಲಾಖೆಯ ಅಭಿಪ್ರಾಯದಂತೆ ಕ್ಯಾಪ್ಟನ್ ಡಾ॥ ಕೆ.ರಾಜೇಂದ್ರ, ಐಎಎಸ್ ಇವರಿಗೆ ಸಂಬಂಧಿಸಿದಂಥ ನೋಷನಲ್ ಜೇಷ್ಠತಾ ಆದೇಶವನ್ನು ಹಿಂಪಡೆಯಲಾಗಿದೆ.
ಉ) ಸರ್ಕಾರದ ಜೇಷ್ಠತಾ ನಿಯಮಗಳು 1957 ರ ನಿಯಮ 6(ಎ)ರ ಸೇವಾ ಜೇಷ್ಠತೆಯನ್ನು ಪರಿಗಣಿಸುವ ನಿಯಮಕ್ಕೆ ಅನ್ವಯವಾಗುವುದಿಲ್ಲ ಎಂದಾದರೆ ಅದಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳನ್ನು ಅವಲಂಬಿಸಿರುವುದು ನಿಜವೇ;	ಹೌದು.
ಊ) ನ್ಯಾಯಾಲಯ ನೀಡಿದ ಆದೇಶಗಳನ್ನು ಅವಲಂಬಿಸಿ ಕಾನೂನು ಅಭಿಪ್ರಾಯ ನೀಡುವಂತೆ ಕಾನೂನು ಇಲಾಖೆಯನ್ನು ಕೋರಿದ್ದೇಕೆ; ಕೋರಿದ್ದಲ್ಲಿ, ಇಂತಹ ಪ್ರಕರಣಗಳ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಬಡ್ತಿಯಿಂದ ಐ.ಎ.ಎಸ್. ಹುದ್ದೆಯನ್ನು ಬಯಸಿದ್ದಾರೆಯೇ;	ಕಾನೂನು ಇಲಾಖೆಯು ಅಭಿಪ್ರಾಯ ನೀಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯಗಳ ಆದೇಶ ಇರುವುದರಿಂದ ಅಂತಹ ಆದೇಶಗಳನ್ನು ಕಾನೂನು ಇಲಾಖೆಯ ಗಮನಕ್ಕೆ ತಂದು ಅಭಿಪ್ರಾಯ ಕೋರಲಾಗಿದೆ. ಇದೇ ರೀತಿಯ ಪ್ರಕರಣಗಳ ಅಡಿಯಲ್ಲಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ್ ಇವರು ಐ.ಎ.ಎಸ್. ಹುದ್ದೆಯನ್ನು ಬಯಸಿದ್ದಾರೆ.

ಕಡತ ಸಂಖ್ಯೆ: ಇ–ಸಿಆಸುಇ 106 ಎಸ್‌ಎಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.